ಮಾರ್ಕೆಟ್‌ಯಾರ್ಡ್	286	ಸಂಪಿಗೆ, ಗುಲ್‌ಮೊಹರ್	
ಕೊಪ್ಪದಕೇರಿ ಜನತಾ ಪ್ಲಾಟ್	136	ರೆನಟ್ರಿ, ಬಸವನಪಾದ,	
ಮರಾಠಾ ಕಾಲನಿ ರಸ್ತೆ	297	ಬಹುನಿಯಾ, ವೆಲ್ಫೇರಾಂ	
ಎಲ್‌ಇಎ ಕ್ಯಾಂಟೀನ್ ರಸ್ತೆ	76	ಹಲಸು ಇತ್ಯಾದಿ.	
(ದುರ್ಗಾದೇವಿ ದೇವಸ್ಥಾನ)			
ಸಿವಿಲ್ ಆಸ್ಪತ್ರೆ ರಸ್ತೆ	1100		
ಗುಂಗಾರಗಟ್ಟಿ	250		
ಜಯನಗರ ಮತ್ತು ಮಿಚಗನ್ ಆವರಣ	450		
ಡಿಸಿ ಕಂಪೌಂಡ್ ಮತ್ತು ಸ್ಟೇಷನ್‌ರಸ್ತೆ	400		
ಪಿಹೆಚ್ ಕ್ಯೂ ರಸ್ತೆ	400		
ಸನ್ಮತಿ ಲೇಔಟ್	156		
ನಾರಾಯಣಪುರ	153		
ಹಳಿಯಾಳ ರಸ್ತೆ	131		
ಸಿದ್ಧನ ಭಾವಿ	255		
ಪಿ.ಹೆಚ್. ಕ್ಯೂ	1100		
ಸಿಟಿ ಪೋಲೀಸ್ ಹೆಡ್‌ಕ್ವಾರ್ಟರ್ಸ್	300		
ಮೃಗರಾಜೇಂದ್ರ ನಗರ	156		
ಸುಭಾಸ್ ರಸ್ತೆ	50		
ಲೈನ್‌ಬಜಾರ್	208		
ಮೇದಾರ ಓಣಿ	116		
ಜೈ ಭೀಮನಗರ	270		
	6293 ಸುಗಳು		

ಬಳ್ಳಾರಿ ವೈದ್ಯಕೀಯ ವಿದ್ಯಾಲಯದ ಖಾಲಿ ಇರತಕ್ಕ ಹುದ್ದೆಗಳು

2433-ಶ್ರೀ ಎಂ. ದಿವಾಕರ್‌ಬಾಬು (ಬಳ್ಳಾರಿ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಳ್ಳಾರಿ ವೈದ್ಯಕೀಯ ವಿದ್ಯಾಲಯದಲ್ಲಿ ಖಾಲಿಯಿರುವ ಉಪನ್ಯಾಸಕರು, ಶುಶ್ರೂಷಕಿಯರು, ಡಿ. ದರ್ಜೆ ನೌಕರರು ಹಾಗೂ ತಂತ್ರಜ್ಞರ ಹುದ್ದೆಗಳೆಷ್ಟು?

ಆ) ಹಾಗಿದ್ದರೂ ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಎಂ. ಶಂಕರನಾಯಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು):

ಅ)		ಖಾಲಿಯಿರುವ ಹುದ್ದೆಗಳ ಸಂಖ್ಯೆ
1)	ಉಪನ್ಯಾಸಕರು	57
2)	ಶುಶ್ರೂಷಕಿಯರು	4
3)	ಡಿ ದರ್ಜೆ ನೌಕರರು	17
4)	ಹಿರಿಯ ಪ್ರಯೋಗಶಾಲಾ ತಂತ್ರಜ್ಞರು	16
5)	ಕಿರಿಯ ಪ್ರಯೋಗಶಾಲಾ ತಂತ್ರಜ್ಞರು	4
6)	ಕ್ಷ-ಕಿರಣ ತಂತ್ರಜ್ಞರು	1

ಆ) ಈಗ ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯವನ್ನು ಸ್ವಾಯತ್ತ ಸಂಸ್ಥೆಯನ್ನಾಗಿ ಪರಿವರ್ತಿಸಿರುವುದರಿಂದ ಸಂಸ್ಥೆಯ ನಿರ್ದೇಶಕರೇ ಆಡಳಿತ ಮಂಡಳಿಯ ಒಪ್ಪಿಗೆಯ ಮೇಲೆ ಮೇಲ್ಕಂಡ ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಬಹುದು.

ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯವನ್ನು ಸ್ವಾಯತ್ತ ಸಂಸ್ಥೆಯಾಗಿ ಘೋಷಣೆ.

2415-ಶ್ರೀ ಎಂ. ದಿವಾಕರ ಬಾಬು (ಬಳ್ಳಾರಿ) : ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯವನ್ನು ಯಾವತ್ತು (ಎಂದು) ಸ್ವಾಯತ್ತ ಸಂಸ್ಥೆಯನ್ನಾಗಿ ಸರ್ಕಾರವು ಘೋಷಿಸಲಾಯಿತು?

ಆ) ಸದರಿ ಸಂಸ್ಥೆಗೆ ಒದಗಿಸಲಾದ ಆಯವ್ಯಯದ ವಿಂಗಡಣೆ ವಿವರ ಸಂಸ್ಥೆಯ ನಿರ್ದೇಶಕರ ಹೆಸರು ಮತ್ತು ಸಂಸ್ಥೆಯ ಸದಸ್ಯರ ವಿವರಗಳನ್ನು ಒದಗಿಸುವುದು.

ಡಾ. ಎಂ. ಶಂಕರ್‌ನಾಯಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು) :

ಅ) ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯವನ್ನು ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ ಎಂದು ಸ್ವಾಯತ್ತ ಸಂಸ್ಥೆಯನ್ನಾಗಿ ಸರ್ಕಾರವು ತನ್ನ ಆದೇಶ ಸಂಖ್ಯೆ : ಹೆಚ್‌ಎಫ್‌ಡಬ್ಲ್ಯೂ 1 ಎಂಪಿಎಸ್ 94 ದಿನಾಂಕ : 11.11.94 ರಂದು ಪರಿವರ್ತಿತ ಆದೇಶ ಹೊರಡಿಸಿರುತ್ತದೆ.

ಆ) ಸದರಿ ಸ್ವಾಯತ್ತ ಸಂಸ್ಥೆಗೆ ಈ ಕೆಳಕಂಡಂತೆ ಪ್ರಸಕ್ತ ವರ್ಷದ (1996-97) ಆಯವ್ಯಯದಲ್ಲಿ ಹಣವನ್ನು ಒದಗಿಸಲಾಗಿದೆ.

(ಲಕ್ಷ ರೂ.ಗಳಲ್ಲಿ).

ಸಂಸ್ಥೆಯ ಹೆಸರು	ಯೋಜನೆ	ಯೋಜನೇತರ	ಒಟ್ಟು
1. ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯ	160.00	418.12	578.12
2. ಬೋಧಕ ಆಸ್ಪತ್ರೆ ಬಳ್ಳಾರಿ	-	480.88	480.88
3. ಸರ್ಕಾರಿ ಟಿ.ಬಿ.(ವೆಲ್ಲೆಸ್ಲಿ)ಆಸ್ಪತ್ರೆ	-	124.06	124.06
ಒಟ್ಟು	160.00	1023.06	1183.06